ಎನ್. ಜಗನ್ನಾಥ ಪ್ರಕಾಶ್


# ಕಲಾವಿದರ ಮಾರ್ಗದರ್ಶಿ ಕೆ. ಸೀತಾರಾಮಯ್ಯ

ಕನ್ನಡ ವೃತ್ತಿ ರಂಗಭೂಮಿಯಲ್ಲಿ ಸ್ತ್ರೀ ಪಾತ್ರಧಾರಿಗಳ ಕೊರತೆಯನ್ನು ನೀಗಿಸುವುದರ ಜೊತೆಗೆ ಸ್ವಂತ ಸಂಸ್ಥೆಯನ್ನು ಸ್ಥಾಪಿಸಿ ಹತ್ತು ಹಲವು ಪ್ರತಿಭಾವಂತ ಕಲಾವಿದರನ್ನು ರಂಗಕ್ಕೆ ಕೊಟ್ಟ ಶ್ರೇಯಸ್ಸು ಕೆ. ಸೀತಾರಾಮಯ್ಯ ಅವರದು.

ಸೀತಪ್ಪ ಎಂದು ಹೆಸರಾದ ಸೀತಾರಾಮಯ್ಯ ಹುಟ್ಟಿದ್ದು ತುಮಕೂರು ಜಿಲ್ಲೆಯ ಗುಬ್ಬಿ ಹೊಸಳ್ಳಿಯಲ್ಲಿ. ಆ ವೇಳೆಗಾಗಲೆ ಗುಬ್ಬಿ ಚೆನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಸಂಘವು ಚಂದಣ್ಣ ಅವರ ನೇತೃತ್ವದಲ್ಲಿ ನಡೆಯುತ್ತಿತ್ತು. ಚಿಕ್ಕಂದಿನಲ್ಲಿ ರಂಗಭೂಮಿ ವಾತಾವರಣ ಸೀತಪ್ಪನವರನ್ನು ಪ್ರೇರೇಪಿಸಿತು. ಹೀಗಾಗಿ ಏಳನೇ ವಯಸ್ಸಿಗೆ ಅವರು ಬಣ್ಣ ಹಚ್ಚಿದರು.

ಮಹಿಳೆಯರು ಇನ್ನೂ ರಂಗಭೂಮಿಗೆ ಕಾಲಿಡದಿದ್ದ ಸಮಯ ಅದು. ಗಂಡಸರೇ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದ ಕಾಲ. ಹದಿಹರೆಯದ ಸೀತಪ್ಪ ಸ್ತ್ರೀ ಪಾತ್ರವನ್ನು ಬೆಡಗು ಬಿನ್ನಾಣಗಳಿಂದ ನಿರ್ವಹಿಸಿದ್ದೇ ತಡ ಮುಖ್ಯ ಪಾತ್ರಗಳು ಅವರನ್ನು ಹುಡುಕಿಕೊಂಡು ಬಂದವು.

ಸ್ತ್ರೀ ಸಹಜ ಹಾವ, ಭಾವಗಳಿಂದ ಪ್ರೇಕ್ಷಕರ ಮನಗೆದ್ದ ಸೀತಪ್ಪ ಪೌರಾಣಿಕ, ಜನಪದ ನಾಟಕಗಳಲ್ಲಿ ಸ್ತ್ರೀ ಪಾತ್ರಗಳನ್ನು ಕಾಯಂಆಗಿ ನಿರ್ವಹಿಸುವ ನಟರಾದರು. ದ್ರೌಪದಿ, ಸೀತೆ, ಸತ್ಯಭಾಮೆ, ಸದಾರಮೆ, ಚಾರುಮತಿ ಹೀಗೆ ಬಹುತೇಕ ಎಲ್ಲಾ ಪಾತ್ರಗಳನ್ನು ವಿಶಿಷ್ಟ ಅಭಿನಯದಿಂದ ಕಳೆ ಕಟ್ಟಿಸಿದ ಸೀತಪ್ಪ ಅಪ್ರತಿಮ ಸ್ತ್ರೀ ಕಲಾವಿದರೆಂದು ಹಿರಿಯ ನಟರ ಮೆಚ್ಚುಗೆಗೆ ಪಾತ್ರರಾದರು.



ಯುವತಿಯ ಓರೆನೋಟ, ಮಧ್ಯಮ ವಯಸ್ಸಿನ ಮಹಿಳೆಯ ತುಮುಲಗಳು, ಪ್ರೇಮಿಯ ಅಂಗಚಲನೆ, ಪ್ರಿಯಕರನತ್ತ ಮುಗುಳ್ನಗೆ, ಹೀಗೆ ಎಲ್ಲಾ ಅಂಶಗಳಿಂದಲೂ ಸೈ ಎನ್ನಿಸಿಕೊಂಡ ಮಹಿಳಾ ಪಾತ್ರಧಾರಿ ಸೀತಪ್ಪ ಅವರು ರಂಗಭೂಮಿಯಲ್ಲಿ ಖ್ಯಾತಿ ಪಡೆದಿದ್ದ ಸ್ತ್ರೀ ಪಾತ್ರಧಾರಿಗಳಿಗಿಂತಲೂ ಭಿನ್ನವಾಗಿ ಅಭಿನಯಿಸಿ ಹೆಸರುಗಳಿಸಿದರು.

ಗುಬ್ಬಿ ಕಂಪನಿಯಲ್ಲಿ ಪಳಗಿದ ಸೀತಪ್ಪ ಮುಂದೆ ಬೆಳ್ಳಾವೆ ಸೋಮೇಶ್ವರ ವಿಲಾಸ ನಾಟಕ ಕಂಪನಿಗೆ ಕಾಲಿಟ್ಟರು. ಅಲ್ಲಿ ಕೂಡ ಯಾವುದೇ